ದಿಃ 13-10-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು : 2 ರಿಂದ 5 ನೇ ಪ್ರತಿವಾದಿ ಪರ ಶ್ರೀ. PBP ವಕೀಲರಿಂದ:**

ನನ್ನ ಅಜ್ಜನಿಗೆ 4 ಜನ ಮಕ್ಕಳು ಇರುತ್ತಾರೆ. ನನ್ನ ಚಿಕ್ಕಪ್ಪ ಶರಣಪ್ಪ ತೀರಿಕೊಂಡಿರುತ್ತಾರೆ ಎಂದರೆ ಸರಿ. ನನ್ನ ಚಿಕ್ಕಪ್ಪ ನಾಗಣ್ಣನಿಗೆ 3 ಜನ ಗಂಡುಮಕ್ಕಳು ಮತ್ತು ಒಬ್ಬರು ಹೆಣ್ಣು ಮಗಳು ಇರುತ್ತಾರೆ. ಅವರುಗಳ ಹೆಸರು ಅಶೋಕ, ಭೀಮಾಶಂಕರ, ಶಂಕರ ಮತ್ತು ಹೆಣ್ಣು ಮಗಳ ಹೆಸರು ನೆನಪಿಲ್ಲ. 1 ನೇ ಪ್ರತಿವಾದಿ ತಂದೆ ಹೆಸರು ನಾಗಣ್ಣ ಇರುತ್ತದೆ. 1 ನೇ ಪ್ರತಿವಾದಿಯ ಅಕ್ಕ ತಂಗಿಯರು 2 ಜನ ಇದ್ದು ಅವರ ಹೆಸರು ಅಂಬುಬಾಯಿ, ಜಯಶ್ರೀ ಇರುತ್ತದೆ. ಅಂಬುಬಾಯಿ, ಜಯಶ್ರೀ ಜೀವಂತ ಇರುತ್ತಾರೆ ಎಂದರೆ ಸರಿ. ಸದರಿಯವರನ್ನು ಈ ದಾವೆಯಲ್ಲಿ ಪಕ್ಷಗಾರನಾಗಿ ಮಾಡಿಲ್ಲ ಎಂದರೆ ಸರಿ. ನನ್ನ ಅಜ್ಜನ ಹೆಸರಿನಲ್ಲಿ ಎಷ್ಟು ಎಕರೆ ಜಮೀನು ಇದೆ ಎಂದು ನನಗೆ ಗೊತ್ತಿಲ್ಲ. ನನ್ನ ಅಜ್ಜನಿಗೆ ಪ್ರತ್ಯೇಕ 3 ಸರ್ವೆ ನಂಬರುಗಳಲ್ಲಿ ಆಸ್ತಿಗಳು ಇದ್ದವು ಎಂದರೆ ಸರಿ. ಅವುಗಳ ಸ.ನಂ. 82 ಮತ್ತು 123 ಮತು ದಾವಾ ಆಸ್ತಿ ಸಂಖ್ಯೆ 120 ಇರುತ್ತವೆ ಎಂದರೆ ಸರಿ.

ಸ.ನಂ. 123 ರಲ್ಲಿ 5 ಎಕರೆ ಜಮೀನು ನನ್ನ ತಂದೆ ಪಾಲಿಗೆ ಬಂದಿರುತ್ತದೆ ಎಂದರೆ ಸರಿಯಲ್ಲ. ಸ.ನಂ. 82 ರಲ್ಲಿ 6 ಎಕರೆ 13 ಗುಂಟೆ ಜಮೀನು ನನ್ನ ತಂದೆ ಪಾಲಿಗೆ ಬಂದಿರುತ್ತದೆ ಎಂದರೆ ಸರಿಯಲ್ಲ. ನನ್ನ ಅಜ್ಜನ ಜೀವಿತ ಕಾಲದಲ್ಲಿ ಆತನ 3 ಜನ ಮಕ್ಕಳಿಗೆ ಪಾಲು ವಾಟ್ನಿ ಮಾಡಿ ಆಸ್ತಿಗಳನ್ನು ಕೊಟ್ಟಿರುತ್ತಾನೆ ಎಂದರೆ ಸರಿಯಲ್ಲ. ದಾವಾ ಆಸ್ತಿ ಹೊರತುಪಡಿಸಿ ಕುಟುಂಬದ ಆಸ್ತಿಗಳಾದ ಸ.ನಂ. 82 ಮತ್ತು 123 ಗಳನ್ನು ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿ. ನನ್ನ ಅಜ್ಜನ ಜೀವಿತಕಾಲದಲ್ಲಿ ಆತನ 3 ಮಕ್ಕಳಿಗೆ ಸ.ನಂ. 82 ಮತ್ತು 123 ರಲ್ಲಿ ಪಾಲು ನೀಡಿದ್ದರೂ ಸಹ ಅವುಗಳನ್ನು ಮಾರಾಟ ಮಾಡಿಡಿ ಈಗ ಪುನಃ ಪ್ರತಿವಾದಿ ನಂ. 2 ರಿಂದ 5 ರವರ ಆಸ್ತಿಯಲ್ಲಿ ಪಾಲು ಕೇಳುತ್ತಿದ್ದೇವೆ ಎಂದರೆ ಸರಿಯಲ. ಬಸಣ್ಣ, ನಾಗಣ್ಣ ಮತ್ತು ಅಣ್ಣಾರಾಯ ಈಗ ಸುಮಾರು 50 ವರ್ಷಗಳ ಹಿಂದೆ ಪಾಲು ವಾಟ್ನಿ ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಪಾಲುವಾಟ್ನಿಯಂತೆ ಅವರವರ ಪಾಲಿನ ಜಮೀನುಗಳಲ್ಲಿ ಕಬ್ಜಾ ವಹಿವಾಟಿನಲ್ಲಿ ಇರುತ್ತಾರೆ ಎಂದರೆ ಸರಿಯಲ್ಲ. ನಮ್ಮ ಅಜ್ಜನಿಂದ ನನ್ನ ತಂದೆಗೆ ಯಾವ ಆಸ್ತಿ

ಬಂದಿರುತ್ತದೆ ಮತ್ತು ಅದರ ದಾಖಲಾತಿಗಳನ್ನು ನೋಡಿರುತ್ತೇನೆ. ನನ್ನ ತಂದೆ ಹೆಸರಿಗೆ 10 ಎಕರೆ ಜಮೀನು ಇದೆ ಎಂದು ನ್ಯಾಯಾಲಯದ ಮುಂದೆ ದಾಖಲಾತಿಗಳನ್ನು ಹಾಜರುಪಡಿಸಿರುತ್ತೇನೆ.

ನನ್ನ ಸಾಕ್ಷ ಪ್ರಮಾಣ ಪತ್ರದಲ್ಲಿ ಬರೆದ ಸಂಗತಿಗಳು ನನಗೆ ಗೊತ್ತಿರುತ್ತದೆ. ಬಸಣ್ಣ, ನಾಗಣ್ಣ ಮತ್ತು ಅಣ್ಣಾರಾಯರಿಗೆ ಈಗ 50 ವರ್ಷಗಳ ಹಿಂದೆ ಪಾಲು ವಾಟ್ನಿ ಆಗಿದ್ದರೂ ಸಹ 1 ನೇ ಪ್ರತಿವಾದಿ ಮಾತುಕೇಳಿ ಸುಳ್ಳು ದಾವೆ ಹೂಡಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>1 ನೇ ಪ್ರತಿವಾದಿ ಪರ ವಕೀಲರು ಪಾಟೀಸವಾಲಿಗೆ ಕಾಲಾವಕಾಶ ಕೋರಿದರಿಂದ ಕಾಲಾವಕಾಶ ನೀಡಲಾಯಿತು.</u>

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು).**

ಓ ಹೇ ಕೇ ಸರಿ ಇದೆ

ಸಿವಿಲ್ & ಪ್ರ.ದ.ನ್ಯಾ ದಂಡಾಧಿಕಾರಿಗಳು
ಅಫಜಲಪೂರ